ಇಲಾಖೆಯಿಂದ ಖಾಸಗಿಯವರು ರೋಣದಲ್ಲಿ ಸುಮಾರು 10.00 ಲಕ್ಷ ರೂ. ವೆಚ್ಚದಲ್ಲಿ ನಿರ್ಮಿಸಲಿರುವ ಒಂದು ಹೋಟೆಲ್ ಪ್ರಾಜೆಕ್ಟ್‌ಗೆ ಅನುಮೋದನೆ ನೀಡಲಾಗಿದೆ.

ಪ್ರವಾಸೋದ್ಯಮ ಇಲಾಖೆಯಿಂದ ಈ ಸ್ಥಳದಲ್ಲಿ ಪ್ರವಾಸಿ ಸೌಲಭ್ಯವನ್ನು ಒದಗಿಸುವ ಪ್ರಸ್ತಾವನೆ ಇರುವುದಿಲ್ಲ.

ಶಿವಮೊಗ್ಗ ತಾಲ್ಲೂಕು ಹೊಳಲೂರು ಹೋಬಳಿ ಬೇಲಕಟ್ಟಿ ಮಾಜಿ ಜೋಡಿದಾರರಿಗೆ ಪರಿಹಾರ ಧನ.

ಶ್ರೀ ಟಿ.ಬಿ. ಜಯಚಂದ್ರ (ಕಳ್ಳಂಬೆಳ್ಳ ಕ್ಷೇತ್ರ) : ಉಪಾಧ್ಯಕ್ಷರೆ, ಶಿವಮೊಗ್ಗ ತಾಲ್ಲೂಕು ಹೊಳಲೂರು ಹೋಬಳಿ ಬೇಲಕಟ್ಟಿ ಜೋಡಿ ಗ್ರಾಮದ ಬಾಬ್ತು 800 ಎಕರೆ 30 ವರ್ಷಗಳಿಂದ ಸರ್ಕಾರದ ಮುಂದೆ ಇತ್ಯಾರ್ಥವಾಗದೇ ಇರುತ್ತದೆ. ಆದುದರಿಂದ ಮಾನ್ಯ ಕಂದಾಯ ಸಚಿವರು ಮಾಜಿ ಜೋಡಿದಾರರ ಮನವಿಯನ್ನು ಪುರಸ್ಕರಿಸಿ ಪರಿಹಾರ ಧನವನ್ನು ಕೊಡಲು ಕ್ರಮ ಕೈಗೊಳ್ಳವರು ಎಂದು ಈ ಮೂಲಕ ಸರ್ಕಾರದ ಗಮನಕ್ಕೆ ತರುವುದಕ್ಕೆ ಇಚ್ಛೆಯನ್ನು ಪಡುತ್ತಿದ್ದೇನೆ.

ಆರ್.ಎಲ್. ಜಾಲಪ್ಪ (ಕಂದಾಯ ಸಚಿವರು) : ಮಾನ್ಯ ಉಪಾಧ್ಯಕ್ಷರೆ, ನಾಳೆ ಹೇಳಿಕೆಯನ್ನು ಕೊಡಿಸುತ್ತೇನೆ.

ಶಾಸನ ರಚನೆ

(1) ಕರ್ನಾಟಕ ನ್ಯಾಯಾಲಯ ಫೀಜುಗಳ ಮತ್ತು ದಾವೆಗಳ ಮೌಲ್ಯ ನಿಗಧಿ (ತಿದ್ದುಪಡಿ) ವಿಧೇಯಕ, 1996.

ಮಂಡನೆಗೆ ಅನುಮತಿ ಕೋರಿಕೆ

+ ಶ್ರೀ ಎಂ.ಪಿ. ಪ್ರಕಾಶ್(ಗ್ರಾಮೀಣಾಭಿವೃದ್ಧಿ ಸಚಿವರು) (ಕಾನೂನು ಮತ್ತು ಸಂಸದೀಯ ಸಚಿವರು ಪರವಾಗಿ) : ಮಾನ್ಯ ಉಪಾಧ್ಯಕ್ಷರೆ, 1996ನ್ನು ಸಾಲಿನ ಕರ್ನಾಟಕ ನ್ಯಾಯಾಲಯ ಫೀಜುಗಳ ಮತ್ತು ದಾವೆಗಳ ಮೌಲ್ಯ ನಿಗಧಿ (ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸಲು ತಮ್ಮ ಅನುಮತಿಯನ್ನು ಕೋರುತ್ತೇನೆ.

ಉಪಾಧ್ಯಕ್ಷರು : ಪ್ರಸ್ತಾಪ ಏನೆಂದರೆ 1996ನೇ ಸಾಲಿನ ಕರ್ನಾಟಕ ನ್ಯಾಯಾಲಯ ಫೀಜುಗಳ ಮತ್ತು ದಾವೆಗಳ ಮೌಲ್ಯ ನಿಗಧಿ (ತಿದ್ದುಪಡಿ) ವಿಧೇಯಕವನ್ನು ಮಂಡಿಸಲು ಅನುಮತಿ ನೀಡುವುದು..

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಅನುಮತಿ ನೀಡಲಾಯಿತು

ಶ್ರೀ ಎಂ.ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಸಚಿವರು) (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರ ಪರವಾಗಿ) : ಕರ್ನಾಟಕ ನ್ಯಾಯಾಲಯ ಫೀಜುಗಳ ಮತ್ತು ದಾವೆಗಳ ಮೌಲ್ಯ ನಿಗದಿ (ತಿದ್ದುಪಡಿ) ವಿಧೇಯಕವನ್ನು ಮಂಡಿಸುತ್ತೇನೆ.

ಉಪಾಧ್ಯಕ್ಷರು : ವಿಧೇಯಕವನ್ನು ಮಂಡಿಸಲಾಯಿತು.

(2) ಕರ್ನಾಟಕ ನ್ಯಾಯಾವಾದಿಗಳ ಕಲ್ಯಾಣ ನಿಧಿ (ತಿದ್ದುಪಡಿ) ವಿಧೇಯಕ, 1996.

(ಮಂಡನೆಗೆ ಅನುಮತಿ ಕೋರಿಕೆ.)

ಶ್ರೀ ಎಂ.ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಸಚಿವರು) (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರ ಪರವಾಗಿ) : 1996ನೇ ಕರ್ನಾಟಕ ನ್ಯಾಯವಾದಿಗಳ ಕಲ್ಯಾಣ ನಿಧಿ (ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸಲು ತಮ್ಮ ಅನುಮತಿಯನ್ನು ಕೋರುತ್ತೇನೆ.

ಉಪಾಧ್ಯಕ್ಷರು : ಪ್ರಸ್ತಾಪ ಏನೆಂದರೆ, 1996ರ ಕರ್ನಾಟಕ ನ್ಯಾಯವಾದಿಗಳ ಕಲ್ಯಾಣ ನಿಧಿ (ತಿದ್ದುಪಡಿ) ವಿಧೇಯವನ್ನು ಮಂಡಿಸಲು ಅನುಮತಿಯನ್ನು ನೀಡುವುದು..

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಅನುಮತಿ ನೀಡಲಾಯಿತು.

ಶ್ರೀ ಎಂ.ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಸಚಿವರು) (ಕಾನೂನು ಮತ್ತು ಸಂಸಧೀಯ ವ್ಯವಹಾರಗಳ ಸಚಿವರ ಪರವಾಗಿ) : 1996 ಕರ್ನಾಟಕ ನ್ಯಾಯವಾದಿಗಳ ಕಲ್ಯಾಣ ನಿಧಿ (ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಉಪಾಧ್ಯಾಕ್ಷರು : ವಿಧೇಯಕವನ್ನು ಮಂಡಿಸಲಾಯಿತು.

(3) ಕರ್ನಾಟಕ ಮೋಟಾರು ವಾಹನಗಳ (ತಿದ್ದುಪಡಿ) ವಿಧೇಯಕ, 1996

(ಮಂಡೆನೆಗೆ ಅನುಮತಿ ಕೋರಿಕೆ)

ಶ್ರೀ ಕೆ.ಎಸ್. ಬೀಳಗಿ (ಸಾರಿಗೆ ಮಂತ್ರಿಗಳು) : ಮಾನ್ಯ ಅಧ್ಯಕ್ಷರೆ, 1996 ನೇ ಸಾಲಿನ ಮೋಟಾರು ವಾಹನಗಳ (ಕರ್ನಾಟಕ ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸಲು ತಮ್ಮ ಅನುಮತಿ ಕೋರುತ್ತೇನೆ.

ಉಪಾಧ್ಯಕ್ಷರು : ಪ್ರಸ್ತಾವ ಏನೆಂದರೆ :

1996ನೇ ಸಾಲಿನ ಮೋಟಾರು ವಾಹನಗಳ (ಕರ್ನಾಟಕ ತಿದ್ದುಪಡಿ) ವಿಧೇಯಕವನ್ನು ಮಂಡಿಸಲು ಅನುಮತಿ ನೀಡುವುದು.

ಪ್ರಸ್ತಾವ ಅಂಗೀಕರಿಸಲ್ಪಟ್ಟಿ ಅನುಮತಿ ನೀಡಲಾಯಿತು

ಶ್ರೀ ಕೆ.ಎಸ್.ಬೀಳಗಿ (ಸಾರಿಗೆ ಮಂತ್ರಿಗಳು) : ಮಾನ್ಯ ಉಪಾಧ್ಯಕ್ಷರೆ,

1996ನೇ ಸಾಲಿನ ಮೋಟಾರು ವಾಹನಗಳ (ಕರ್ನಾಟಕ ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸುತ್ತೇನೆ.